**ದಿನಾಂಕ: 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯವಿಚಾರಣೆ: ಎದುರುದಾರರ ಪರ ಶ್ರೀ.ಜೆ.ಬಿ.ಹೆಚ್ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ.

| | |
|---|---|
| ನಿಆರ್-1 | Authorization Letter |
| ನಿಆರ್-2 | ಮಧ್ಯಂತರ ಪರಿಹಾರ ಪಾವತಿಸುವ ರಸೀದಿ |

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

1. ಅಪಘಾತವಾದ ದಿನ KSRTC ಬಸ್ ನಂ.ಕೆಎ-35 ಎಫ್-0197 ನೇದ್ದರ ಚಾಲಕ ನೀವು ಇದ್ದೀರಿ ಎಂದರೆ ಸರಿ. ಅಪಘಾತವು ನಿಮ್ಮ ತಪ್ಪಿನಿಂದ ಆಗಿದೆ ಎಂದು ಕಲ್ಬುರ್ಗಿಯ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ನಿಮ್ಮ ಮೇಲೆ ಪ್ರಕರಣ ದಾಖಲಾಗಿದೆ ಎಂದರೆ ನನ್ನ ತಪ್ಪು ಇಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವಾದ ದಿನ ಬಸ್ ನಂ.ಕೆಎ-35 ಎಫ್-0197 ಜೇವರ್ಗಿಯಿಂದ ಕಲ್ಬುರ್ಗಿಗೆ ಹೋಗುತ್ತಿತ್ತು ಎಂದರೆ ಸರಿ. ಅಪಘಾತವು ನೀವು ಬರುವಂತಹ ಮಾರ್ಗ ಬಿಟ್ಟು ಕಲ್ಬುರ್ಗಿಯಿಂದ ಜೇವರ್ಗಿ ಕಡೆಗೆ ಬರುವ ಮಾರ್ಗವಾಗಿ ಅಪಘಾತ ಆಗಿರುತ್ತದೆ ಎಂದರೆ ಮೋಟಾರ್ ಸೈಕಲ್ ಚಾಲಕನು ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಾ ಬರುತ್ತಿದ್ದ. ಸದರಿ ಮೋಟಾರ್ ಸೈಕಲ್ ಮೇಲೆ ಮೂರು ಜನ ಬರುತ್ತಿದ್ದರು. ಅವರನ್ನು ನೋಡಿ ನಾನು ಬಸ್ಸನ್ನು ಸ್ಥಳದಲ್ಲೇ ನಿಲ್ಲಿಸಿದ್ದೆ ಎಂದು ಉತ್ತರಿಸುತ್ತಾರೆ.

2. ಸಾಕ್ಷಿಗೆ ನಿಪಿ-5 ಗುನ್ನ ಸ್ಥಳದ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಕಚ್ಚಾ ನಕಾಶೆಯನ್ನು ತೋರಿಸಿ ಪೆಟ್ರೋಲ್ ಬಂಕ್ ಎದರುಗಡೆ ಅಪಘಾತ ಆಗಿದೆ ಎಂದು ತೋರಿಸಿದ್ದಾರೆ ಎಂದರೆ ನನ್ನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಉತ್ತರಿಸುತ್ತಾರೆ. ಪೊಲೀಸರು ಅಪಘಾತ ನಿಮ್ಮ ತಪ್ಪಿನಿಂದ ಆಗಿದೆ ಎಂದು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ ಅದರ ವಿರುದ್ಧ ಎಲ್ಲಿಯಾದರೂ ತಕರಾರು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವು ನಿಮ್ಮ ತಪ್ಪಿನಿಂದ ಆಗಿದೆ ಎಂದು ನಿಮ್ಮ ಸಂಸ್ಥೆಯವರು ಈಗಾಗಲೇ ಅರ್ಜಿದಾರರಿಗೆ ರೂ.25,000/- ಮಧ್ಯಂತರ ಪರಿಹಾರದ ಹಣ ನೀಡಿದ್ದಾರೆ ಎಂದರೆ ಸರಿ. ನಿಮ್ಮ ನಿಗಮದ ಪರಿಹಾರದ ಬಾದ್ಯತೆಯನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ